**ಬೆಂಗಳೂರು**
**ನಗರ ವಿಶ್ವವಿದ್ಯಾನಿಲಯ**

**BENGALURU**
**CITY UNIVERSITY**

Office of the Registrar, Central College Campus, Dr. B.R. Ambedkar Veedhi, Bengaluru – 560 001.
PhNo.080-22131385, E-mail: registrarbcu@gmail.com


ಸಂಖ್ಯೆ: ಬಿಸಿಯು/ಎಸ್‌ವೈಎನ್/ವಿಶೇಷ/[illegible]/2020–21 ದಿನಾಂಕ: 04.03.2021

ಗೆ,

ಮಾನ್ಯ ಸಿಂಡಿಕೇಟ್ ಸದಸ್ಯರು,
ಬೆಂಗಳೂರು ನಗರ ವಿಶ್ವವಿದ್ಯಾನಿಲಯ,
ಬೆಂಗಳೂರು

ಮಾನ್ಯರೆ,

**ವಿಷಯ: ದಿನಾಂಕ: 25.02.2021 ರಂದು ಜರುಗಿದ ಸಿಂಡಿಕೇಟ್ ವಿಶೇಷ ಸಭೆಯ ನಡಾವಳಿಗಳು.**

***

ದಿನಾಂಕ: 25.02.2021 ರಂದು ಪೂರ್ವಾಹ್ನ 10–30 ಗಂಟೆಗೆ ಜರುಗಿದ ಸಿಂಡಿಕೇಟ್ ವಿಶೇಷ ಸಭೆಯ ನಡಾವಳಿಗಳನ್ನು ಮಾನ್ಯ ಕುಲಪತಿಗಳು ಅನುಮೋದಿಸಿದಂತೆ, ಬೆಂಗಳೂರು ವಿಶ್ವವಿದ್ಯಾಲಯದ ಪರಿನಿಯಮಾವಳಿ 5.16 ರನ್ವಯ ಕಳುಹಿಸುತ್ತಿದ್ದೇನೆ.

ನಡಾವಳಿಗಳನ್ನು ರವಾನಿಸಿದ ದಿನಾಂಕದಿಂದ ಏಳು ದಿನಗಳೊಳಗಾಗಿ ಸಭೆಯಲ್ಲಿ ಹಾಜರಿದ್ದ ಸದಸ್ಯರು, ನಡಾವಳಿಗಳ ಬಗ್ಗೆ ಯಾವುದೇ ಆಕ್ಷೇಪಣೆಯನ್ನು ಕಳುಹಿಸದಿದ್ದಲ್ಲಿ, ಮೇಲೆ ಹೇಳಿದ ಪರಿನಿಯಮಾವಳಿಗಳ ಅನುಸಾರ ಅವುಗಳನ್ನು ಸ್ಥಿರೀಕರಿಸಲಾಗಿದೆ ಎಂದು ಪರಿಗಣಿಸಲಾಗುವುದು.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ,

ಕುಲಸಚಿವರು

ಅಡಕ: ಮೇಲಿನಂತೆ

ಪ್ರತಿಗಳು:

1. ರಾಜ್ಯಪಾಲರ ಕಾರ್ಯದರ್ಶಿಗಳು, ರಾಜಭವನ, ಬೆಂಗಳೂರು – 560 001.
2. ಪ್ರಧಾನ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ (ವಿಶ್ವವಿದ್ಯಾಲಯ), ಕರ್ನಾಟಕ ಸರ್ಕಾರ, ಬೆಂಗಳೂರು–1.
3. ಕುಲಪತಿಗಳು, ಕುಲಸಚಿವರು, ಕುಲಸಚಿವರು (ಮೌಲ್ಯಮಾಪನ), ವಿತ್ತಾಧಿಕಾರಿಗಳ ಆಪ್ತ ಕಾರ್ಯದರ್ಶಿಗಳಿಗೆ. ಬಿಸಿಯು.
4. ಕಛೇರಿ ಪ್ರತಿ / ರಕ್ಷಣಾ ಕಡತ

ಬೆಂಗಳೂರು
ನಗರ ವಿಶ್ವವಿದ್ಯಾನಿಲಯ

BENGALURU
CITY UNIVERSITY

Office of the Registrar, Central College Campus, Dr. B.R. Ambedkar Veedhi, Bengaluru – 560 001.
PhNo.080-22131385, E-mail: registrarbcu@gmail.com

ಸಂಖ್ಯೆ: ಬಿಸಿಯು/ಎಸ್‌ವೈಎನ್/ವಿಶೇಷ/134/2020-21 ದಿನಾಂಕ: 04.03.2021

ದಿನಾಂಕ 25.02.2021 ರಂದು ಪೂರ್ವಾಹ್ನ 10.30 ಗಂಟೆಗೆ ಬೋರ್ಡ್‌ರೂಮ್, ಜ್ಞಾನಜ್ಯೋತಿ ಸಭಾಂಗಣ, ಅರಮನೆ ರಸ್ತೆ, ಬೆಂಗಳೂರು 560 001 ಇಲ್ಲಿ ಜರುಗಿದ ಬೆಂಗಳೂರು ನಗರ ವಿಶ್ವವಿದ್ಯಾನಿಲಯ ವಿಶೇಷ ಸಿಂಡಿಕೇಟ್ ಸಭೆಯ ನಡಾವಳಿಗಳು.

ಹಾಜರಾದ ಸದಸ್ಯರು:

| | | |
|---|---|---|
| 1. | ಪ್ರೊ. ನರಸಿಂಹಮೂರ್ತಿ | ಸಭಾಧ್ಯಕ್ಷರು |
| 2. | ಡಾ: ಹೆಚ್. ಟಿ. ಅರವಿಂದ್ | ಸದಸ್ಯರು |
| 3. | ಡಾ. ಹೆಚ್. ಆರ್. ಸತೀಶ್ | ಸದಸ್ಯರು |
| 4. | ಪ್ರೊ. ಕೆ. ರಮೇಶ್ | ಸದಸ್ಯರು |
| 5. | ಡಾ: ಲಿಡಿಯಾ ಪಿ. ಸ್ಯಾಮುಯೆಲ್ | ಸದಸ್ಯರು |
| 6. | ಡಾ: ಪಿ.ವಿ. ಪದ್ಮಜಾ, | ಸದಸ್ಯರು |
| 7. | ಪ್ರೊ: ಎಂ. ಚಿಕ್ಕಮುನಿಯಪ್ಪ | ಸದಸ್ಯರು |
| 8. | ಶ್ರೀ ಕರಣ್‌ಕುಮಾರ್ | ಸದಸ್ಯರು |
| 9. | ಶ್ರೀ ಹೆಚ್.ಎನ್. ಹರಿಪ್ರಸಾದ | ಸದಸ್ಯರು |
| 10. | ಶ್ರೀಮತಿ ಜ್ಯೋತಿ ವಿಜಯ್ | ಸದಸ್ಯರು |
| 11. | ಶ್ರೀ ಟಿ.ಹೆಚ್. ಶ್ರೀನಿವಾಸಯ್ಯ | ಸದಸ್ಯರು |
| 12. | ಡಾ: ಆರ್.ಕೆ. ಚಂದ್ರನಾಥ್ | ಸದಸ್ಯರು |
| 13. | ಶ್ರೀ ಥಾಮಸ್ ನೀಲಿಯಾರ | ಸದಸ್ಯರು |
| 14. | ಪ್ರೊ. ಬಿ. ರಮೇಶ್<br>ಕುಲಸಚಿವರು(ಮೌಲ್ಯಮಾಪನ) | ಸದಸ್ಯರು |
| 15. | ಶ್ರೀಮತಿ ಆರತಿ ಆನಂದ್, ಕೆ.ಎ.ಎಸ್<br>(ಹಿರಿಯ ಶ್ರೇಣಿ)<br>ಕುಲಸಚಿವರು | ಸದಸ್ಯ ಕಾರ್ಯದರ್ಶಿಗಳು |

ದಿನಾಂಕ 25.02.2021 ಗುರುವಾರ ಬೆಳಿಗೆ 11.15ಕ್ಕೆ ಸಿಂಡಿಕೇಟ್ ಸಭೆ ಪ್ರಾರಂಭವಾಗಿ ಕುಲಚಿವರು ಎಲ್ಲಾ ಸದಸ್ಯರುಗಳನ್ನು ಹಾಗೂ ವಿಶೇಷ ಆಹ್ವಾನಿತರಾದ ಶ್ರೀ ಪಿ. ಎಲ್. ವೆಂಕಟೇಶ್ ಮೂರ್ತಿ ವಿತ್ತಾಧಿಕಾರಿಗಳು ಅವರನ್ನು ಸ್ವಾಗತಿಸಿದರು.

**ವಿಷಯ: ಬೆಂಗಳೂರು ನಗರ ವಿಶ್ವವಿದ್ಯಾಲಯದ ಕ್ಯಾಂಪಸ್ ಪುನರಾಭಿವೃದ್ಧಿಯ ಬಗ್ಗೆ**

ಕುಲಸಚಿವರು ಮಾತನಾಡಿ ದಿನಾಂಕ: 16-02-2021ರಂದು ಜರುಗಿದ ಸಾಮಾನ್ಯ ಸಿಂಡಿಕೇಟ್ ಸಭೆಯಲ್ಲಿ ಮುಂದೂಡಲ್ಪಟ್ಟ ವಿಷಯ ಸಂಖ್ಯೆ 11 ರ ವಿಶ್ವವಿದ್ಯಾನಿಲಯದ ಪುನರಾಭಿವೃದ್ಧಿ ಕಾರ್ಯಗಳನ್ನು ಕೈಗೆತ್ತಿಕೊಳ್ಳಲು ಸಿಂಡಿಕೇಟ್ ಸಭೆಯ ಅನುಮತಿಯನ್ನು ಕೋರಿ ಸಭೆಯ ಮುಂದೆ ವಿಷಯವನ್ನು ಮಂಡಿಸಿದರು.

ಕುಲಪತಿಗಳು ಮಾತನಾಡುತ್ತಾ ವಿಶ್ವವಿದ್ಯಾನಿಲಯದ ಆವರಣದಲ್ಲಿ ಅಭಿವೃದ್ಧಿ ಕಾಮಗಾರಿಗಳ ನೀಲಿನಕ್ಷೆ ಮತ್ತು ಸರ್ಕಾರ ತೆಗೆದುಕೊಂಡಿರುವ ತೀರ್ಮಾನಗಳನ್ನು ಮತ್ತು ಹಳೆ ಕಟ್ಟಡಗಳ ದುರಸ್ಥಿ ಹಾಗೂ ನವೀಕರಣಗಳ ಅವಶ್ಯಕತೆಗಳನ್ನು ಸಭೆಗೆ ವಿವರಿಸಿ ಅಭಿವೃದ್ಧಿ ಕೆಲಸಗಳನ್ನು ಕೈಗೊಳ್ಳಲು ಅನುಮೋದನೆ ನೀಡಬೇಕೆಂದು ಕೋರಿದರು.

ಮಾನ್ಯ ಸದಸ್ಯರಾದ ಡಾ. ಆರ್ ಕೆ. ಚಂದ್ರನಾಥ್‌ರವರು ಮಾತನಾಡುತ್ತಾ ವಿಶ್ವವಿದ್ಯಾನಿಲಯದ ಪುನರಾಭಿವೃದ್ಧಿಯ ವಿಷಯವನ್ನು ಪ್ರಸ್ತಾಪ ಮಾಡಿ ವಿಶ್ವವಿದ್ಯಾನಿಲಯದ ಅಭಿವೃದ್ಧಿಗೆ 6ನೇ ಕಾಮಗಾರಿ ಸಮಿತಿಯು ತೆಗೆದುಕೊಂಡಿರುವ ನಿರ್ಣಯದಂತೆ ಕ್ರಮ ವಹಿಸಲು ನನ್ನ ಸಹಮತವಿದೆ ಎಂದು ತಿಳಿಸುತ್ತಾ ವಿಶ್ವವಿದ್ಯಾನಿಲಯವು ಅಭಿವೃದ್ಧಿಯ ಯೋಜನೆಯನ್ನು ಜರೂರಾಗಿ ಕೈಗೊಳ್ಳಬೇಕೆಂದು ಸೂಚಿಸಿದರು. ಸದಸ್ಯರು ಮುಂದುವರೆದು ಮಾತನಾಡುತ್ತಾ ವಿಶ್ವವಿದ್ಯಾನಿಲಯದಲ್ಲಿ ಗಿಡ ಮರಗಳನ್ನು ಬೆಳೆಸೋಣ ಮತ್ತು ಗಿಡ ಮರಗಳು ವಿಶ್ವವಿದ್ಯಾನಿಲಯದ ಒಂದು ಭಾಗವಾಗಿರಬೇಕೆಂದು ತಿಳಿಸುತ್ತಾ ಮಹಾ ಯೋಜನೆಯಲ್ಲಿ ತಿಳಿಸಿರುವಂತೆ ಹುಲ್ಲುಹಾಸಿನ ಅವಶ್ಯಕತೆ ಇಲ್ಲದಿರುವುದನ್ನು ತಿಳಿಸಿದರು. ವಿಶ್ವವಿದ್ಯಾನಿಲಯದಲ್ಲಿ ಹಾಲಿ ಇರುವ ಕಟ್ಟಡಗಳು ಹಳೆಯ ಕಟ್ಟಡಗಳಾಗಿದ್ದು ಮಳೆಗಾಲದಲ್ಲಿ ಸೋರಿಕೆಯಾಗುತ್ತಿದ್ದು ಈ ಕಟ್ಟಡದ ದುರಸ್ತಿಯನ್ನು ಜರೂರಾಗಿ ಕೈಗೆತ್ತಿಕೊಳ್ಳಬೇಕೆಂದು ಅಭಿಪ್ರಾಯ ಪಟ್ಟರು.

ಮಾನ್ಯ ಸದಸ್ಯರಾದ ಶ್ರೀ ಹೆಚ್. ಆರ್. ಸತೀಶ್ ರವರು ಮಾತನಾಡುತ್ತಾ ಈ ವಿಷಯವು ಸಚಿವ ಸಂಪುಟದಲ್ಲಿ ಚರ್ಚೆಯಾಗಿ ಸರ್ಕಾರವು ವಿಶ್ವವಿದ್ಯಾನಿಲಯದ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ತೀರ್ಮಾನಿಸಿವುದರಿಂದ ಈ ಹಂತದಲ್ಲಿ ವಿಶ್ವವಿದ್ಯಾನಿಲಯವು ಸಂಬಂಧಪಟ್ಟ ಸಂಸ್ಥೆಗಳೊಂದಿಗೆ ಒಡಂಬಡಿಕೆ ಮಾಡಿಕೊಂಡು ಕ್ರಮವಹಿಸುವುದು ಸೂಕ್ತವೆಂದು ತಿಳಿಸಿದರು. ಮುಂದುವರೆದು ಮಾತನಾಡುತ್ತಾ ವಿಶ್ವವಿದ್ಯಾನಿಲಯದ ಹಳೆಯ ಕಟ್ಟಡದ ದುರಸ್ತಿ ಮತ್ತು ನವೀಕರಣ ಕಾಮಗಾರಿಯನ್ನು ಜರೂರಾಗಿ ಕೈಗೊಳ್ಳಲು ಸರ್ಕಾರ ಸೂಚಿಸಿರುವ ಸಂಸ್ಥೆಗೆ ವಹಿಸಬೇಕೆಂದು ಅಭಿಪ್ರಾಯ ಪಟ್ಟರು.

ಮಾನ್ಯ ಸದಸ್ಯರಾದ ಪ್ರೊ. ಎಂ. ಚಿಕ್ಕಮುನಿಯಪ್ಪನವರು ಮಾತನಾಡಿ ಮಾನ್ಯ ಸದಸ್ಯರುಗಳಾದ ಡಾ. ಆರ್. ಕೆ. ಚಂದ್ರನಾಥ್ ಮತ್ತು ಶ್ರೀ ಹೆಚ್. ಆರ್. ಸತೀಶ್‌ರವರು ಸೂಚಿಸಿರುವ ಅಭಿಪ್ರಾಯ ಮತ್ತು ಸಲಹೆಗಳನ್ನು ಒಪ್ಪುತ್ತೇನೆಂದು ತಿಳಿಸುತ್ತಾ ಈಗಾಗಲೇ ಸರ್ಕಾರ ನೀಡಿರುವ ಆದೇಶದ ಪ್ರಕಾರ ಕೆಲಸ ನಿರ್ವಹಿಸಬೇಕಾಗಿದೆ ಎಂದು ಅಭಿಪ್ರಾಯ ಪಟ್ಟರು.

ಕುಲಸಚಿವರು(ಮೌಲ್ಯಮಾಪನ) ಅವರು ಮಾತನಾಡಿ ಪ್ರಸ್ತುತ ಬೆಂಗಳೂರು ನಗರ ವಿಶ್ವವಿದ್ಯಾನಿಲಯದಲ್ಲಿ 18 ಸ್ನಾತಕೋತ್ತರ ವಿಭಾಗಗಳು ಮಾತ್ರ ಕಾರ್ಯನಿರ್ವಹಿಸುತ್ತಿದ್ದು ಮುಂದಿನ ಶೈಕ್ಷಣಿಕ ವರ್ಷಗಳಲ್ಲಿ ಇನ್ನಷ್ಟು ಸ್ನಾತಕೋತ್ತರ ವಿಭಾಗಗಳನ್ನು ಆರಂಭಿಸಬೇಕಿರುವುದರಿಂದ ಹೊಸ ಕಟ್ಟಡಗಳ ನಿರ್ಮಾಣ ಮತ್ತು ಹಳೆಯ ಶೈಕ್ಷಣಿಕ ಕಟ್ಟಡಗಳ ದುರಸ್ಥಿ ಮತ್ತು ನವೀಕರಣ ಶೀಘ್ರವಾಗಿ ಆಗಬೇಕಿದೆ ಎಂದು ತಿಳಿಸಿದರು ಮತ್ತು ವಿದ್ಯಾರ್ಥಿನಿಲಯಗಳ ನಿರ್ಮಾಣವು ಸಹಾ ಅಗತ್ಯವಾಗಿದೆ ಎಂದು ತಿಳಿಸುತ್ತಾ 6ನೇ ಕಾಮಗಾರಿ ಸಮಿತಿಯ ಶಿಫಾರಸ್ಸನ್ನು ಅನುಮೋದಿಸಬಹುದು ಎಂದು ತಿಳಿಸಿದರು.

ಚರ್ಚೆಯಲ್ಲಿ ಭಾಗವಹಿಸಿ ಪ್ರೊ. ಎಂ. ಚಿಕ್ಕಮುನಿಯಪ್ಪನವರು ಸಹ ಈ ವಿಷಯಕ್ಕೆ ಸಹಮತವನ್ನು ವ್ಯಕ್ತಪಡಿಸುತ್ತಾ ಮೂಲಭೂತ ಸೌಕರ್ಯಗಳ ಜೊತೆಗೆ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿನಿಲಯದ ಅವಶ್ಯಕತೆಯು ಬಹಳ ಮುಖ್ಯವಾದುದೆಂದು ಅಭಿಪ್ರಾಯ ಪಟ್ಟರು.

ಚರ್ಚೆಯಲ್ಲಿ ಭಾಗವಹಿಸಿದ ಮಾನ್ಯ ಸದಸ್ಯರಾದ ಶ್ರೀ. ಹೆಚ್. ಆರ್. ಸತೀಶ್ ರವರು ವಿಶ್ವವಿದ್ಯಾನಿಲಯದ ಕಟ್ಟಡಗಳಲ್ಲಿ ಈಗಾಗಲೇ ಕಾರ್ಯನಿರ್ವಹಿಸುತ್ತಿರುವ ಬಾಹ್ಯ ಸಂಸ್ಥೆಗಳ ಬಗ್ಗೆ ಸಭಾಧ್ಯಕ್ಷರಿಂದ ಮಾಹಿತಿಯನ್ನು ಕೋರಿದರು. ಕುಲಪತಿಗಳು ಮಾನ್ಯ ಸದಸ್ಯರು ಕೇಳಿರುವ ಮಾಹಿತಿಗಳಿಗೆ ಪೂರಕವಾಗಿ ವಿಶ್ವವಿದ್ಯಾನಿಲಯದ ಆವರಣದಲ್ಲಿ ವಿಶ್ವವಿದ್ಯಾನಿಲಯದ ಧನಸಹಾಯ ಆಯೋಗ (UGC), AICTE, ICHR, ಕೇಂದ್ರ ಸಾಹಿತ್ಯ ಅಕಾಡೆಮಿ, ರಾಜ್ಯದ ವಿಶ್ರಾಂತ ಕುಲಪತಿಗಳ ವೇದಿಕೆ, ಕನ್ನಡ ವಿಶ್ವವಿದ್ಯಾನಿಲಯದ ಪ್ರಸಾರಾಂಗ ವಿಭಾಗ ಮತ್ತು ಸೆಂಟ್ರಲ್ ಕಾಲೇಜಿನ ಹಳೆಯ ವಿದ್ಯಾರ್ಥಿಗಳ ಸಂಘಗಳು ವಿಶ್ವವಿದ್ಯಾನಿಲಯದ ಆವರಣದಲ್ಲಿ ಬೇರೆ ಬೇರೆ ಕಟ್ಟಡಗಳಿಂದ ಕಾರ್ಯವನ್ನು ನಿರ್ವಹಿಸುತ್ತಿವೆ ಈ ಸಂಸ್ಥೆಗಳನ್ನು ತೆರವುಗೊಳಿಸರು ವಿಶ್ವವಿದ್ಯಾನಿಲಯವು ನ್ಯಾಯಾಲಯದಲ್ಲಿ ದಾವೆಯನ್ನು ಹೂಡಿದ್ದು ಈ ವಿಷಯವು ಪ್ರಗತಿಯಲ್ಲಿದೆ ಎಂದು ತಿಳಿಸಿದರು.

ಕುಲಸಚಿವರು ಮಾತನಾಡುತ್ತಾ ಬೆಂಗಳೂರು ವಿಶ್ವವಿದ್ಯಾಲಯದಿಂದ ಈ ಎಲ್ಲಾ ಸಂಸ್ಥೆಗಳ ಬಗ್ಗೆ ಏನಾದರೂ ಒಪ್ಪಂದದ ಕರಾರುಗಳು ಮಾಡಿಕೊಂಡಿರುವ ಬಗ್ಗೆ ಮಾಹಿತಿಯನ್ನು ಕೋರಲಾಗಿದೆ ಎಂದು ಸಭೆಗೆ ತಿಳಿಸಿದರು. ಪ್ರಸನ್ನ ಕುಮಾರ ಬ್ಲಾಕ್‌ನಲ್ಲಿರುವ ವಾಣಿಜ್ಯ ಕಟ್ಟಡದ ಹಸ್ತಾಂತರದ ಬಗ್ಗೆ ಈಗಾಗಲೇ ಬೆಂಗಳೂರು ವಿಶ್ವವಿದ್ಯಾಲಯದ ಕುಲಸಚಿವರೊಂದಿಗೆ ಪತ್ರ ವ್ಯವಹಾರವನ್ನು ನಡೆಸಿದ್ದು ಆದಷ್ಟು ಶೀಘ್ರದಲ್ಲಿಯೇ ಈ ಕಟ್ಟಡವನ್ನು ವಿಶ್ವವಿದ್ಯಾಲಯದ ಸುಪರ್ದಿಗೆ ತೆಗೆದುಕೊಳ್ಳಲು ಕ್ರಮ ವಹಿಸಲಾಗುವುದು ಎಂದು ತಿಳಿಸಿದರು.

ಚರ್ಚೆಯಲ್ಲಿ ಭಾಗವಹಿಸಿದ ಮಾನ್ಯ ಸದಸ್ಯರಾದ ಶ್ರೀ. ಟಿ. ಹೆಚ್. ಶ್ರೀನಿವಾಸಯ್ಯನವರು ಮಾತನಾಡುತ್ತಾ ಬೆಂಗಳೂರು ನಗರ ವಿಶ್ವವಿದ್ಯಾನಿಲಯದಲ್ಲಿ 43 ಎಕರೆ ಭೂಮಿ ಲಭ್ಯವಿದ್ದು ಈ ಭೂಮಿಯು ಸರ್ಕಾರದ ಲೋಕೋಪಯೋಗಿ ಇಲಾಖೆಯ ಹೆಸರಿನಲ್ಲಿದೆ ಎಂದು ತಿಳಿಸಿದರು. ವಿಶ್ವವಿದ್ಯಾನಿಲಯದಲ್ಲಿ ಎಲ್ಲೆಲ್ಲಿ ಖಾಲಿ ಭೂಮಿ ಇದೆ ಮತ್ತು ಯಾವ ಸಂಸ್ಥೆಗಳನ್ನು ವಿಶ್ವವಿದ್ಯಾನಿಲಯದ ಆವರಣದಿಂದ ತೆರವುಗೊಳಿಸಬೇಕು ಎಂಬುದರ ಸಾಧಕ ಭಾದಕಗಳನ್ನು ಅಧ್ಯಯನ ಮಾಡಿ ವರದಿಯನ್ನು ನೀಡಲು ಮಾನ್ಯ ಸದಸ್ಯರಾದ ಡಾ. ಆರ್. ಕೆ. ಚಂದ್ರನಾಥ್ ರವರ ನೇತೃತ್ವದಲ್ಲಿ ಒಂದು ಸಲಹಾ ಸಮಿತಿಯನ್ನು ರಚನೆ ಮಾಡಿ ತುರ್ತು ಕ್ರಮ ವಹಿಸುವಂತೆ ತಿಳಿಸಿದರು.

ಕುಲಪತಿಗಳು ಮಾತನಾಡಿ ವಿಶ್ವವಿದ್ಯಾನಿಲಯದ ಆವರಣದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಸರ್ಕಾರಿ ಸಂಸ್ಥೆಗಳನ್ನು ತೆರವುಗೊಳಿಸುವುದು ದೀರ್ಘಾವದಿಯ ಪ್ರಕ್ರಿಯೆಯಾಗಿದ್ದು ಸಂಧಾನ ಅಥವಾ ಮಾತುಕತೆ ಮುಖಾಂತರ ಕ್ರಮ ವಹಿಸಲಾಗುವುದೆಂದು ಸಭೆಗೆ ತಿಳಿಸಿದರು.

ಈ ಚರ್ಚೆಯಲ್ಲಿ ಭಾಗವಹಿಸಿದ ಮಾನ್ಯ ಸದಸ್ಯರಾದ ಶ್ರೀಮತಿ. ಜ್ಯೋತಿ ವಿಜಯ್ ರವರು ಪ್ರಸ್ತುತ ವಿಶ್ವವಿದ್ಯಾನಿಲಯದಲ್ಲಿ ಕಟ್ಟಡಗಳನ್ನು ಹೊರತುಪಡಿಸಿ ಎಷ್ಟು ಎಕರೆ ಖಾಲಿ ಜಾಗ ಉಳಿಯಬಹುದೆಂದು ಸಭಾಧ್ಯಕ್ಷರಿಂದ ಮಾಹಿತಿಯನ್ನು ಕೋರಿದರು.

ಕುಲಪತಿಗಳು ಮಾನ್ಯ ಸದಸ್ಯರು ಕೋರಿದ ಮಾಹಿತಿಗೆ ಅನುಗುಣವಾಗಿ ವಿಶ್ವವಿದ್ಯಾನಿಲಯದ ಆವರಣದಲ್ಲಿ ಕ್ರಿಕೆಟ್ ಆಟದ ಮೈದಾನವೂ ಸೇರಿದಂತೆ ಪ್ರಸನ್ನ ಕುಮಾರ ಬ್ಲಾಕ್, ಹಳೆ ಮಹಿಳಾ ವಿದ್ಯಾರ್ಥಿ ನಿಲಯದ ಅವರಣ, AICTE ಮತ್ತು ಹಳೆಯ ಕಾನೂನು ಕಾಲೇಜುಗಳ ಆವರಣದಲ್ಲಿ ಲಭ್ಯವಿರುವ ಜಾಗವೂ ಸೇರಿದಂತೆ 17 ಎಕರೆ ಜಾಗವು ಲಭ್ಯವಿದೆ ಎಂದು ತಿಳಿಸಿದರು.

ಚರ್ಚೆಯಲ್ಲಿ ಮುಂದುವರೆದು ಮಾತನಾಡಿದ ಶ್ರೀಮತಿ ಜ್ಯೋತಿ ವಿಜಯ್ ರವರು ಯಾವುದೇ ಮಹಾ ಯೋಜನೆಯನ್ನು ಕೈಗೊಳ್ಳುವುದಕ್ಕೆ ಮೊದಲು ಮುಂದಿನ ಶೈಕ್ಷಣಿಕ ವರ್ಷದಿಂದ ಅನುಷ್ಠಾನಗೊಳ್ಳಬೇಕಾಗಿರುವ NEP ಯನ್ನು ದೃಷ್ಟಿಯಲ್ಲಿ ಇಟ್ಟುಕೊಂಡು ಯೋಜನೆಗಳನ್ನು ರೂಪಿಸಬೇಕೆಂದು ಅಭಿಪ್ರಾಯ ಪಟ್ಟರು.

ಚರ್ಚೆಯಲ್ಲಿ ಭಾಗವಹಿಸಿದ ಮಾನ್ಯ ಸದಸ್ಯರಾದ ಶ್ರೀ ಕರಣ್ ಕುಮಾರ್ ರವರು ಮಾತನಾಡುತ್ತಾ ವಿಶ್ವವಿದ್ಯಾನಿಲಯದ ಅಭಿವೃದ್ಧಿ ಯೋಜನೆಯನ್ನು ತರಾತುರಿಯಲ್ಲಿ ಕೈಗೆತ್ತಿಕೊಳ್ಳಲು ಸಾಧ್ಯವಿಲ್ಲವೆಂದು ತಿಳಿಸುತ್ತಾ ಈ ಯೋಜನೆಯನ್ನು ಅಂತಿಮಗೊಳಿಸಲು ಇನ್ನು 2–3 ತಿಂಗಳ ಕಾಲಾವಕಾಶ ಬೇಕೆಂದು ತಿಳಿಸಿದರು. ವಿಶ್ವವಿದ್ಯಾನಿಲಯವು ಈ ಮಹಾ ಯೋಜನೆಯನ್ನು ಕೈಗೊಳ್ಳಲು ಹಿಂದೆ ಇದ್ದ ಕುಲಪತಿಗಳು ಸರ್ಕಾರಕ್ಕೆ 90 ಕೋಟಿ ರೂಪಾಯಿಗಳನ್ನು ವಿಶ್ವವಿದ್ಯಾನಿಲಯವು ನೀಡುತ್ತದೆ ಎಂದು ಪತ್ರ ವ್ಯವಹಾರ ಮಾಡಿರುವುದು ಸರಿಯಾದ ಕ್ರಮವಲ್ಲವೆಂದು ತಿಳಿಸುತ್ತಾ ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಕಾಯ್ದೆ 2000ರ ಉಪಭಾಗ 26ರ ಪ್ರಕಾರ ಈ ವಿಷಯವನ್ನು ಪುನರ್ ಪರಿಶೀಲಿಸಲು ಸಿಂಡಿಕೇಟ್‌ಗೆ ಅಧಿಕಾರವಿರುವುದರಿಂದ ಈ ಮಹಾ ಯೋಜನೆಯ ಕಾರ್ಯಗತದ ಬಗ್ಗೆ ಪುನರ್ ಪರಿಶೀಲಿಸಬೇಕೆಂದು ಸಭೆಗೆ ವಿವರಿಸಿ ಹೇಳತ್ತಾ ವಿಶ್ವವಿದ್ಯಾನಿಲಯವು ಸ್ವಾಯುತ್ತ ಸಂಸ್ಥೆಯಾಗಿರುವುದರಿಂದ ಈ ವಿಚಾರದಲ್ಲಿ ಸರ್ಕಾರವೂ ಕೂಡಾ ವಿಶ್ವವಿದ್ಯಾನಿಲಯದ ಆಗು ಹೋಗುಗಳಲ್ಲಿ ಮಧ್ಯ ಪ್ರವೇಶಿಸಲು ಸಾಧ್ಯವಿಲ್ಲ ಎಂದು ತಿಳಿಸಿದರು.

ಮಾನ್ಯ ಸದಸ್ಯರಾದ ಶ್ರೀ ಕರಣ್ ಕುಮಾರ್ ರವರು ಮುಂದುವರೆದು ಮಾತನಾಡುತ್ತಾ ಈ ವಿಶ್ವವಿದ್ಯಾನಿಲಯವು ಮುಂದಿನ 50 ವರ್ಷಗಳಲ್ಲಿ ವಿದೇಶಿ ವಿಶ್ವವಿದ್ಯಾಲಯಗಳ ಮಟ್ಟಕ್ಕೆ ಬರಬಹುದು ಮತ್ತು ನಾವುಗಳೆಲ್ಲ ಪ್ರಯತ್ನ ಪಟ್ಟರೆ ಈ ಕಾರ್ಯವನ್ನು ಸಾದಿಸಬಹುದೆಂದು ತಿಳಿಸುತ್ತಾ, ನಾನು ಈಗಾಗಲೇ ವೈಯಕ್ತಿಕವಾಗಿ ಕೆಲವು ಕಾರ್ಪೋರೇಟ್ ಸಂಸ್ಥೆಗಳೊಂದಿಗೆ ಮಾತನಾಡಿದ್ದು 50–60 ಕೋಟಿ ರೂಪಾಯಿಗಳನ್ನು ಸಾಮಾಜಿಕ ಹೊಣೆಗಾರಿಕೆ ಅಡಿಯಲ್ಲಿ ನೀಡಲು ಮುಂದೆ ಬಂದಿದ್ದಾರೆಂದು ವಿವರಿಸಿದರು. ಸಾಮಾಜಿಕ ಹೊಣೆಗಾರಿಕೆ ಅಡಿಯಲ್ಲಿ ಕಾರ್ಪೋರೇಟ್ ಸಂಸ್ಥೆಗಳು ವಿಶ್ವವಿದ್ಯಾಲಯಕ್ಕೆ ಅವಶ್ಯಕವಿರುವ ಕಟ್ಟಡಗಳನ್ನು ನಿರ್ಮಿಸಿ ಕೊಡಲು ಮುಂದೆ ಬರುತ್ತವೆ ಎಂದು ತಿಳಿಸುತ್ತಾ ವಿಶ್ವವಿದ್ಯಾನಿಲಯದ ಆವರಣದಲ್ಲಿ ಲಭ್ಯವಿರುವ ಜಾಗದಲ್ಲಿ ಸುಮಾರು 24 ಅಂತಸ್ತಿನ ಕಟ್ಟಡವನ್ನು ನಿರ್ಮಿಸಿಕೊಡಲು ನಾನು ಈಗಾಗಲೇ ವೈಯಕ್ತಿಕವಾಗಿ ಹಲವು ಸಂಸ್ಥೆಗಳೊಂದಿಗೆ ಮಾತನಾಡಿದ್ದೇನೆಂದು ತಿಳಿಸಿದರು.

ಈ ಮಹಾ ಯೋಜನೆಯನ್ನು ವಿಶ್ವವಿದ್ಯಾನಿಲಯವೇ ಬಾಹ್ಯ ಸಂಸ್ಥೆಗಳಿಂದ ಅಥವಾ ಭಾರತೀಯ ವಿಜ್ಞಾನ ಸಂಸ್ಥೆಯ ಸಹಾಯವನ್ನು ಪಡೆದು ವಿದ್ಯಾರ್ಥಿಗಳಿಗೆ ಅನುಕೂಲಕರವಾದ ರೀತಿಯಲ್ಲಿ ಯೋಜನೆಯನ್ನು ರೂಪಿಸಬಹುದೆಂದು ಅಭಿಪ್ರಾಯ ಪಟ್ಟರು. ವಿಶ್ವವಿದ್ಯಾನಿಲಯವು ಈ ಯೋಜನೆಯನ್ನು ಕೈಗೆತ್ತಿಕೊಳ್ಳುವ ಮೊದಲು ಈ ಯೋಜನೆಯ ಸಾಧಕ ಬಾಧಕಗಳನ್ನು ಪುನರ್ ಪರಿಶೀಲಿಸಬೇಕೆಂದು ಸಭಾಧ್ಯಕ್ಷರಲ್ಲಿ ಕೋರಿದರು.

ಈ ಚರ್ಚೆಯಲ್ಲಿ ಭಾಗವಹಿಸಿದ ಮಾನ್ಯ ಸದಸ್ಯರಾದ ಶ್ರೀ. ಥಾಮಸ್ ನೀಲಿಯಾರ್ ರವರು ಮಾತನಾಡಿ 24 ಅಂತಸ್ತಿನ 24ಲಕ್ಷ ಚದರ ಅಡಿಯ ಕಟ್ಟಡವನ್ನು ನಿರ್ಮಿಸಲು ಈಗಿನ ಮಾರುಕಟ್ಟೆಯ ದರದೊಂದಿಗೆ ತುಲನೆ ಮಾಡಿದರೆ ಸುಮಾರು 1000 ಕೋಟಿ ರೂಪಾಯಿಗಳ ಖರ್ಚು ತಗುಲಬಹುದು ಇಷ್ಟು ಅಗಾಧವಾದ ಅನುದಾನವನ್ನು ಕಾರ್ಪೊರೇಟ್ ಸಂಸ್ಥೆಗಳಾಗಲೀ ಅಥವಾ ಸರ್ಕಾರವಾಗಲೀ ಭರಿಸಲು ಮುಂದೆ ಬರುವುದಿಲ್ಲ. 24 ಅಂತಸ್ತಿನ ಬಹುಮಹಡಿಗಳ ಕಟ್ಟಡದ ಕನಸಿನ ಯೋಜನೆಯನ್ನು ವಿಶ್ವವಿದ್ಯಾಯವು ಕೈಗೆತ್ತಿಕೊಳ್ಳಲು ಸಾಧ್ಯವಿಲ್ಲದ ಕಾರ್ಯವಾಗಿದ್ದು, ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಈಗಾಗಲೇ ಸರ್ಕಾರವು ತೆಗೆದುಕೊಂಡಿರುವ ತೀರ್ಮಾನದಂತೆ ಮುಂದುವರೆಯಬಹುದೆಂದು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದರು.

ಈ ಚರ್ಚೆಯಲ್ಲಿ ಭಾಗವಹಿಸಿದ ಮಾನ್ಯ ಸದಸ್ಯರಾದ ಡಾ. ಲಿಡಿಯಾ ಪಿ ಸ್ಯಾಮುಯೆಲ್ ರವರು ಮಾತನಾಡುತ್ತಾ ಒಂದು ವರ್ಷದಿಂದ ವಿಶ್ವವಿದ್ಯಾನಿಲಯವು ಈ ಮಹಾ ಯೋಜನೆಯ ಬಗ್ಗೆ ಚರ್ಚೆ ಮಾಡುತ್ತಲೇ ಇದ್ದು ಈ ಯೋಜನೆಯನ್ನು ಕಾರ್ಯಗತಗೊಳಿಸುವ ಅಂತಿಮ ಹಂತಕ್ಕೆ ಬರಲು ವಿಫಲವಾಗಿದೆ ಮತ್ತು ಈ ವಿಷಯವು ಅನೇಕ ಸಿಂಡಿಕೇಟ್ ಸಭೆಗಳಲ್ಲಿ ಚರ್ಚೆಯಾಗಿದ್ದು ಇನ್ನೂ ವಿಳಂಬ ಮಾಡುವುದು ಸರಿಯಿಲ್ಲವೆಂದು ತಿಳಿಸುತ್ತಾ ಸರ್ಕಾರ ಮತ್ತು ವಿಶ್ವವಿದ್ಯಾನಿಲಯವು ರೂಪಿಸಿರುವ ಮಹಾ ಯೋಜನೆಯನ್ನು ಕಾರ್ಯಗತಗೊಳಿಸಬೇಕೆಂದು ಅಭಿಪ್ರಾಯ ಪಟ್ಟರು.

ಮಾನ್ಯ ಸದಸ್ಯರಾದ ಶ್ರೀ ಹೆಚ್ ಎನ್ ಹರಿಪ್ರಸಾದ್ ಮಾತನಾಡಿ ಈ ಯೋಜನೆಯನ್ನು ಎರಡು ಭಾಗಗಳಾಗಿ ಮಾಡಬಹುದಾಗಿದೆ. ಒಂದು ಅಲ್ಪಕಾಲಿಕ ಯೋಜನೆ ಮತ್ತು ದೀರ್ಘಕಾಲಿಕ ಯೋಜನೆ ಮಾಡಬಹುದಾಗಿದೆ. ಇದರಲ್ಲಿ NEP ಬಗ್ಗೆ ಯೋಚಿಸಬಹುದಾಗಿದೆ. ಈಗಾಗಲೇ ಸರ್ಕಾರ ಕೈಗೊಂಡಿರುವ ತೀರ್ಮಾನದ ವಿರುದ್ಧ ಸಭೆಯಲ್ಲಿ ಚರ್ಚಿಸುವುದು ಬೇಡ ಮತ್ತು 6ನೇ ಕಾಮಗಾರಿ ಸಮಿತಿಯ ನಿರ್ಣಯದಂತೆ ಮುಂದುವರೆಯೋಣ ಎಂದರು.

ಮಾನ್ಯ ಸದಸ್ಯರಾದ ಶ್ರೀ ಹೆಚ್ ಎನ್ ಹರಿಪ್ರಸಾದರವರು ವ್ಯಕ್ತಪಡಿಸಿರುವ ಅಭಿಪ್ರಾಯಕ್ಕೆ ಪ್ರೊ ಎಂ. ಚಿಕ್ಕಮುನಿಯಪ್ಪ ಅವರು ಸಹಮತ ವ್ಯಕ್ತಪಡಿಸಿದರು.

ಚರ್ಚೆಯಲ್ಲಿ ಭಾಗವಹಿಸಿ ತಮ್ಮ ಅಭಿಪ್ರಾಯವನ್ನು ಮುಂದುವರೆಸಿ ಮಾತನಾಡಿದ ಶ್ರೀಮತಿ ಜ್ಯೋತಿ ವಿಜಯ್ ರವರು ವಿಶ್ವವಿದ್ಯಾನಿಲಯದಲ್ಲಿ ಲಭ್ಯವಿರುವ 17 ಅಥವಾ 27 ಎಕರೆ ಜಾಗವೇ ಆಗಿರಲಿ ಈ ಜಾಗದ ಸಂಪೂರ್ಣ ಸದ್ಬಳಕೆಯಾಗಬೇಕು ಮತ್ತು ಇದು ವಿಶ್ವವಿದ್ಯಾನಿಲಯದ ಶ್ರೇಯೋಭಿವೃದ್ಧಿಗೆ ಪೂರಕವಾಗಿರಬೇಕೆಂದು ತಿಳಿಸುತ್ತಾ ವಿಶ್ವವಿದ್ಯಾನಿಲಯವು ಯಾವುದೇ ಯೋಜನೆಯನ್ನು ಕೈಗೆತ್ತಿಕೊಳ್ಳುವ ಮೊದಲು ದೀರ್ಘ ದೃಷ್ಟಿಯನ್ನು ಗಮನದಲ್ಲಿಟ್ಟುಕೊಂಡು ಧೀರು ಭಾಯ್ ಅಂಬಾನಿ ರವರ ಕಂಪನಿಗಳ ತರಹ ಮಹಾಯೋಜನೆಗಳನ್ನು ರೂಪಿಸಿ ಈ ಕಾರ್ಯದಲ್ಲಿ ತೊಡಗಿಸಿಕೊಳ್ಳಬೇಕಾಗಿರುತ್ತದೆ ಎಂದು ತಿಳಿಸುತ್ತಾ, ಕ್ರೀಡಾ ಸಮುಚ್ಛಯದ ನಿರ್ಮಾಣಕ್ಕೆ 84 ಕೋಟಿ ರೂಪಾಯಿಗಳನ್ನು ವಿಶ್ವವಿದ್ಯಾನಿಲಯವು ಭರಿಸುವುದು ಸಮಂಜಸವಲ್ಲವೆಂದು ತಿಳಿಸುತ್ತಾ, ಕಳೆದ ಒಂದು ವರ್ಷದ ಕರೋನ ಸಂಕಷ್ಟದ ಲಾಕ್‌ಡೌನ್ ಅವಧಿಯಲ್ಲಿಯೂ 1600 ಕೋಟಿ ರೂಪಾಯಿಗಳಷ್ಟು ವ್ಯವಹಾರ ನಡೆಸಿರುವ

ಬಹುರಾಷ್ಟ್ರ ಕಂಪನಿಯಾದ ಡೆಕತ್‌ಲಾನ್ ಕಂಪನಿಯವರು ವಿಶ್ವವಿದ್ಯಾನಿಲಯಕ್ಕೆ ತಮ್ಮ ಸಾಮಾಜಿಕ ಹೊಣೆಗಾರಿಕೆ ಯೋಜನೆಯಡಿ ಕ್ರೀಡಾ ಸಮುಚ್ಛಯವನ್ನು ನಿರ್ಮಿಸಲು ಮುಂದೆ ಬರಬಹುದು ಮತ್ತು ಈ ಸಂಸ್ಥೆಯ ಮೇಲಧಿಕಾರಿಗಳು ನನಗೆ ವೈಯಕ್ತಿಕವಾಗಿ ಗೊತ್ತಿರುವುದರಿಂದ ಸಭೆಯು ನನಗೆ ಈ ಕಾರ್ಯಭಾರವನ್ನು ವಹಿಸಿದರೆ ನಾನು ಈ ಸಂಸ್ಥೆಯ ಮೇಲಾಧಿಕಾರಿಗಳೊಂದಿಗೆ ಚರ್ಚಿಸಿ ಅನುದಾನವನ್ನು ತರಬಲ್ಲೆ ಎಂದು ತಿಳಿಸಿದರು.

ಚರ್ಚೆಯಲ್ಲಿ ಭಾಗವಹಿಸಿದ ಮಾನ್ಯ ಸದಸ್ಯರಾದ ಶ್ರೀ ಹೆಚ್. ಎನ್. ಹರಿಪ್ರಸಾದ ರವರು ಸರ್ಕಾರವು ಈಗಾಗಲೇ ಅನುಮೋದಿಸಿರುವ 155 ಕೋಟಿ ರೂಪಾಯಿಗಳ ಕಾಮಗಾರಿ ನಿರ್ವಹಣೆಯನ್ನು ನಿಲ್ಲಿಸದೇ ಮುಂದುವರೆಯಬೇಕೆಂದು ತಿಳಿಸುತ್ತಾ ಕಾರ್ಪೊರೇಟ್ ಸಂಸ್ಥೆಗಳು ತಮ್ಮ ಸಾಮಾಜಿಕ ಹೊಣೆಗಾರಿಕೆ ಯೋಜನೆಯಡಿ ಹಣವನ್ನು ಕೊಡುವುದಾದರೆ ಅವರ ಹೆಸರಿನಲ್ಲಿಯೇ ಕಟ್ಟಡಗಳನ್ನು ನಿರ್ಮಿಸಬಹುದೆಂದು ತಿಳಿಸುತ್ತಾ ಈ ರೀತಿಯ ನಿಧಿ ಸಂಗ್ರಹಣೆಗೆ ಒಂದು ಸಮಿತಿಯನ್ನು ರಚಿಸಬಹುದು ಮತ್ತು ಈ ರೀತಿಯ ಅನುದಾನವನ್ನು ಪಡೆಯುವ ಬಗ್ಗೆ ಮುಂದೆ ಪರಿಶೀಲಿಸೋಣ ಎಂದು ಹೇಳುತ್ತಾ ಪ್ರಸ್ತುತ ವಿಶ್ವವಿದ್ಯಾನಿಲಯದ ಮುಂದಿರುವ ಮಹಾ ಯೋಜನೆಯನ್ನು ಕಾರ್ಯಗತಗೊಳಿಸಲು ಮುಂದುವರೆಯೋಣ ಎಂದು ಅಭಿಪ್ರಾಯ ಪಟ್ಟರು.

ಚರ್ಚೆಯಲ್ಲಿ ಭಾಗವಹಿಸುತ್ತಾ ಮಾನ್ಯ ಸದಸ್ಯರಾದ ಶ್ರೀ ಟಿ. ಎಚ್. ಶ್ರೀನಿವಾಸಯ್ಯನವರು ಮಾತನಾಡುತ್ತಾ ಈ ಮಹಾಯೋಜನೆಯಿಂದ ಹಿಂದೆ ಹೋಗುವುದು ಸರಿಯಲ್ಲ ಸರ್ಕಾರ ಮತ್ತು ಸಚಿವ ಸಂಪುಟ ಈ ಯೋಜನೆಗೆ ಅನುಮೋದನೆ ನೀಡಿದ್ದು ಸರ್ಕಾರ ಆದೇಶದ ವಿರುದ್ಧ ವಿಶ್ವವಿದ್ಯಾನಿಲಯವು ಹೋಗುವುದು ಸರಿಯಲ್ಲವೆಂದು ತಿಳಿಸುತ್ತಾ ಆದಷ್ಟು ಬೇಗ ಈ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲು ವಿಶ್ವವದ್ಯಾನಿಲಯವು ಸರ್ಕಾರದೊಂದಿಗೆ ಪತ್ರ ವ್ಯವರಹಾರ ನಡೆಸಿ ಅಭಿವೃದ್ಧಿ ಕಾರ್ಯವನ್ನು ಕೈಗೆತ್ತಿಕೊಳ್ಳಬೇಕೆಂದು ತಿಳಿಸಿದರು. ಮುಂದುವರೆದು ಶ್ರೀ ಟಿ. ಹೆಚ್ ಶ್ರೀನಿವಾಸಯ್ಯನವರು ಮಾತನಾಡುತ್ತಾ ಸದಸ್ಯರು ಕಾರ್ಪೊರೇಟ್ ಸಂಸ್ಥೆಗಳಿಂದ ಎಷ್ಟೇ ಕೋಟಿಗಳನ್ನು ತಂದರೂ ಇನ್ನೂ ಅನೇಕ ಕಾಮಗಾರಿಯನ್ನು ಕೈಗೊಳ್ಳಬೇಕಾಗಿರುವುದರಿಂದ ಈ ಸಾಮಾಜಿಕ ಹೊಣೆಗಾರಿಕೆ ಅನುದಾನವನ್ನು ಮುಂದಿನ ಅಭಿವೃದ್ಧಿ ಕಾರ್ಯಗಳಿಗೆ ಬಳಸಿಕೊಳ್ಳಬಹುದು ಎಂದು ತಿಳಿಸಿದರು.

ಸದಸ್ಯರಾದ ಶ್ರೀಮತಿ ಜ್ಯೋತಿ ವಿಜಯ್ ಅವರು ಈ ವಿಷಯ ಒಳ್ಳೆಯ ಕೆಲಸವಾದುದರಿಂದ 60 ದಿನದಲ್ಲಿ CSR ಅಡಿಯಲ್ಲಿ ಅನುದಾನ ತರಬಹುದು ಸ್ಪೋರ್ಟ್ಸ್ ಕಾಂಪ್ಲೆಕ್ಸ್‌ಗೆ 200 ಕೋಟಿ ಅನುದಾನ ನೀಡಲು ಅನೇಕ ಸಂಸ್ಥೆಗಳು ಸಿದ್ಧರಿದ್ದಾರೆ ಆದ್ದರಿಂದ, ಆರು ತಿಂಗಳಲ್ಲಿ 10 ಸಂಸ್ಥೆಗಳಿಗೆ ಆಹ್ವಾನವನ್ನು ನೀಡಿದರೆ ಬಹಳಷ್ಟು ಅನುದಾನವು ವಿಶ್ವವದ್ಯಾನಿಲಯಕ್ಕೆ ಬರುವುದರಿಂದ ಇಂತಹ ಕಾಮಗಾರಿಗಳನ್ನು ಕೈಗೊಳ್ಳಬಹುದು ಆದ್ದರಿಂದ ಸರ್ಕಾರ ಮತ್ತು ವಿಶ್ವವಿದ್ಯಾನಿಲಯವು ರೂಪಿಸಿರುವ ಈ ಮಹಾಯೋಜನೆಯನ್ನು ಅನುಷ್ಠಾನ ಮಾಡುವುದನ್ನು ವಿಳಂಬ ಮಾಡಬಹುದೆಂದು ಅಭಿಪ್ರಾಯ ಪಟ್ಟರು.

ಸದಸ್ಯರಾದ ಶ್ರೀ ಕರಣ್ ಕುಮಾರ್ ರವರು ಮಾತನಾಡಿ ವಿಶ್ವವಿದ್ಯಾನಿಲಯದಲ್ಲಿ ಒಂದು ಅಭಿಯಂತರರ ವಿಭಾಗವನ್ನು ಪ್ರಾರಂಭ ಮಾಡಬೇಕು ಇದಾಗದಿದ್ದರೆ ಅನುದಾನಿತ ಇಂಜಿನಿಯರಿಂಗ್ ಕಾಲೇಜುಗಳ ಪ್ರಾಧ್ಯಾಪಕರ ಸೇವೆಯನ್ನು ಪಡಿದುಕೊಂಡು ಒಂದು ನೀಲಿ ನಕ್ಷೆಯನ್ನು ತಯಾರಿಸಿ 30–40 ಕೋಟಿ ರೂಪಾಯಿಗಳಲ್ಲಿ ಈ ಕಾರ್ಯಗಳನ್ನು ಕೈಗೊಳ್ಳಬಹುದೆಂದು ತಿಳಿಸಿದರು. ಇನ್ನು 4 ತಿಂಗಳಲ್ಲಿ ಈ ಮಹಾಯೋಜನೆಗೆ ಕಾರ್ಪೊರೇಟ್ ಸಂಸ್ಥೆಗಳಿಂದ 40–50 ಕೋಟಿ ರೂಪಾಯಿಗಳ ಅನುದಾನವನ್ನು ಕೊಡಿಸಲು ಸಿದ್ದನಿದ್ದೇನೆಂದು ತಿಳಿಸುತ್ತ ಡೆಕತ್‌ಲಾನ್ ನಂತಹ 4–5 ಸಂಸ್ಥೆಗಳಿಂದ ಅನುದಾನವನ್ನು ತಂದು ಈ ಮಹಾ ಯೋಜನೆಯು 6 ತಿಂಗಳಲ್ಲಿ ಜಾರಿಗೆ ಬರುವಂತೆ ಮಾಡೋಣ ಆದ್ದರಿಂದ ವಿಶ್ವವಿದ್ಯಾನಿಲಯ ಮತ್ತು ಸರ್ಕಾರವು ತಯಾರಿಸಿರುವ ನೀಲಿ ನಕ್ಷೆಯ ಮಹಾಯೋಜನೆಯನ್ನು ಸದ್ಯಕ್ಕೆ ಸೀಮಿತಗೊಳಿಸಬೇಕೆಂದು ತಿಳಿಸಿದರು.

ಮಾನ್ಯ ಕುಲಪತಿಗಳು ಮಾತನಾಡಿ ವಿಶ್ವವಿದ್ಯಾನಿಲಯದಲ್ಲಿ ಖಾಯಂ ಅಭಿಯಂತರರ ವಿಭಾಗ ಇರುವುದಿಲ್ಲ ಮತ್ತು ಸರ್ಕಾರದ ಲೋಕೋಪಯೋಗಿ ಇಲಾಖೆಗೆ ಪತ್ರವನ್ನು ಬರೆದರೂ ಕೂಡಾ ಅಲ್ಲಿಂದ ಸರಿಯಾದ ಸ್ಪಂದನೆ ಇಲ್ಲದಿರುವುದರಿಂದ ವಿಶ್ವವಿದ್ಯಾನಿಲಯದ ಆವರಣದಲ್ಲಿರುವ ಹಳೆಯ ಕಟ್ಟಡಗಳು ಕುಸಿಯುವ ಸ್ಥಿತಿಯಲ್ಲಿದ್ದು, ಗ್ರಂಥಾಲಯ ಕಟ್ಟಡವು ಯಾವುದೇ ಸಮಯದಲ್ಲಿ ಕುಸಿಯುವ ಹಂತವನ್ನು ತಲುಪಿರುತ್ತದೆ. ಆದುದರಿಂದ ಈ ಮಹಾಯೋಜನೆಯಲ್ಲಿ ಕಟ್ಟಡಗಳ ದುರಸ್ತಿ ಮತ್ತು ನವೀಕರಣಗಳ ಕಾಮಗಾರಿಗೆ ಮೊದಲನೆ ಆದ್ಯತೆಯನ್ನು ನೀಡಬೇಕಾಗುತ್ತದೆ. ಸರ್ಕಾರವು ಈ ಕಾಮಗಾರಿಗಳನ್ನು ಕೈಗೊಳ್ಳಲು ಯಾವುದೇ ಸಂಸ್ಥೆಗೆ ವಹಿಸಿದರೂ ವಿಶ್ವವಿದ್ಯಾನಿಲಯದ ಅಭ್ಯಂತರವಿರುವುದಿಲ್ಲ, ಆದರೆ ವಿಶ್ವವಿದ್ಯಾನಿಲಯಕ್ಕೆ ಇನ್ನು 6 ತಿಂಗಳಲ್ಲಿ ಕಟ್ಟಡದ ದುರಸ್ತಿ ಮತ್ತು ನವೀಕರಣದ ಕಾರ್ಯವು ಮುಗಿಯಬೇಕಾಗಿದೆ ಎಂದು ಸಭೆಗೆ ತಿಳಿಸಿದರು.

ಈ ಚರ್ಚೆಯಲ್ಲಿ ಭಾಗವಹಿಸಿದ ಸದಸ್ಯರಾದ ಶ್ರೀ ಕರಣ್ ಕುಮಾರ್ ರವರು ಕಟ್ಟಡದ ನಿರ್ಮಾಣವು ಸರ್ಕಾರವೇ ಕಟ್ಟಬೇಕಾಗಿರುವುದಿಲ್ಲ ಯಾವುದೇ ಸಂಸ್ಥೆಯಾದರೂ ಕಟ್ಟಬಹುದಾಗಿದೆ ಮತ್ತು ಈ ಕಾರ್ಯವನ್ನು ಸರ್ಕಾರವೇ ಸೂಚಿಸಿರುವ ಸಂಸ್ಥೆಗೆ ಕೊಡಲೇಬೇಕೆಂದಿಲ್ಲ, ವಿಶ್ವವಿದ್ಯಾನಿಲಯವು ಈ ಕೆಲಸವನ್ನು ಕೇಂದ್ರ ಸರ್ಕಾರದ ಸಂಸ್ಥೆಗಳಿಗೂ ಸಹಾ ವಹಿಸಬಹುದಾಗಿರುತ್ತದೆ ಎಂದು ತಿಳಿಸಿದರು.

ಚರ್ಚೆಯಲ್ಲಿ ಭಾಗವಹಿಸಿದ ಸದಸ್ಯರಾದ ಶ್ರೀ ಹೆಚ್. ಆರ್. ಹರಿಪ್ರಸಾದ ರವರು ಮಾತನಾಡುತ್ತಾ ಈ ಕಾಮಗಾರಿಗಳ ಕಾರ್ಯವನ್ನು ಸರ್ಕಾರವು ಕರ್ನಾಟಕ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಅಭಿಯಂತರರ ವಿಭಾಗಕ್ಕೆ ವಹಿಸಿರುವುದರಿಂದ ಅವರೇ ಈ ಕೆಲಸವನ್ನು ನಿರ್ವಹಿಸುವುದು ಸೂಕ್ತ ಎಂದು ಅಭಿಪ್ರಾಯ ಪಟ್ಟರು.

ಈ ಚರ್ಚೆಯಲ್ಲಿ ಭಾಗವಹಿಸಿದ ಸದಸ್ಯರಾದ ಶ್ರೀ ಕರಣ್ ಕುಮಾರ್‌ರವರು ಕರ್ನಾಟಕ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಅಭಿಯಂತರರ ವಿಭಾಗಕ್ಕೆ ಈ ಕಾಮಗಾರಿಯನ್ನು ವಹಿಸಿರುವುದು ಸಿಂಡಿಕೇಟ್ ಗಮನಕ್ಕೆ ಬಂದಿರುವುದಿಲ್ಲ ಮತ್ತು ಇಲ್ಲಿ ತೀರ್ಮಾನವೇ ಆಗಿರುವುದಿಲ್ಲ ಆದರೂ ಸರ್ಕಾರವು ಏಕಪಕ್ಷೀಯವಾಗಿ ತೀರ್ಮಾನ ತೆಗೆದುಕೊಂಡಿರುವುದು ಸರಿಯಲ್ಲ ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.

ಮಾನ್ಯ ಸದಸ್ಯರಾದ ಡಾ. ಹೆಚ್. ಟಿ. ಅರವಿಂದ ಅವರು ಮಾತನಾಡಿ ಒಳ್ಳೆಯ ಬೆಳವಣಿಗೆಯಲ್ಲಿ ಚರ್ಚೆ ನಡೀತಿದೆ. ಈ ವಿಶ್ವವಿದ್ಯಾಲಯದ ನವೆಂಬರ್ 2019 ಸಿಂಡಿಕೇಟ್ ಸಭೆಯಲ್ಲಿ ಪ್ರಸ್ತಾಪ ಬಂದಿದೆ. ಈ ಹಿಂದಿನ ಉಪಕುಲಪತಿಗಳು ತಮಗೆ ಗೊತ್ತಿರುವ ವಾಸ್ತುಶಿಲ್ಪಿಗಳಿಂದ ನೀಲಿ ನಕ್ಷೆ ತಯಾರಿಸಿ ವಿಶ್ವವಿದ್ಯಾನಿಲಯವನ್ನು ಉನ್ನತ ದರ್ಜೆಗೆ ತರಬೇಕು ಎಂಬ ದೃಷ್ಟಿಯಿಂದ ಚಾಲ್ತಿಗೆ ತಂದರು. ಆಗ ಒಂದು ಸಂದರ್ಭದಲ್ಲಿ ವಿಶ್ವವಿದ್ಯಾನಿಲಯದ ಅಭಿವೃದ್ಧಿ ಮಾಡಲು ಶ್ರೀ ಹೆಚ್. ಆರ್. ಸತೀಶ್ ಅವರು ಮಾತನಾಡಿ ಪಾರಂಪರಿಕ ಕಟ್ಟಡಗಳನ್ನು ಉನ್ನತೀಕರಿಸಿ ದುರಸ್ಥಿ ಮಾಡಬೇಕು  ಎಂದು ಹೇಳಿದ್ದನ್ನು 16.06.2020 ರಲ್ಲಿ ಇದಕ್ಕೆ ವಿಷಯಸೂಚಿ ಮಾಡಲಾಯಿತು. ಅದರಂತೆ ನಾಲ್ಕು ನಿರ್ಣಯ ಮಾಡಲಾಯಿತು. ಈ ಕಾಮಗಾರಿಗಳಿಗೆ ತಗುಲುವ ಮೊತ್ತ, ಎಷ್ಟು ವರ್ಷಗಳಲ್ಲಿ ಕಾಮಗಾರಿಯನ್ನು ಪೂರ್ಣಗೊಳಿಸಬೇಕು ಈ ಕಾಮಗಾರಿಗಳ ಅನುಷ್ಠಾನಕ್ಕೆ ಕೇಂದ್ರ ಅಥವಾ ರಾಜ್ಯ ಸರ್ಕಾರದ ಯಾವ ಸಂಸ್ಥೆಗೆ ವಹಿಸಬೇಕು ಎಂದು ಚರ್ಚೆ ನಡೆಯಿತು. ವಿದ್ಯಾರ್ಥಿಗಳ ಹಾಸ್ಟೆಲ್ ಬಗ್ಗೆಯೂ ಚರ್ಚೆ ಮಾಡಲಾಗಿ ಈ ಕಾಮಗಾರಿಗೆ ಹಣಕಾಸಿನ ಸಂಪನ್ಮೂಲವಿದ್ದು ವಿಶ್ವವಿದ್ಯಾನಿಲಯದ ಯಾವ ಜಾಗದಲ್ಲಿ ವಿದ್ಯಾರ್ಥಿನಿಲಯನ್ನು ನಿರ್ಮಿಸಬೇಕು ಎಂಬುದು ಕೂಡ ಚರ್ಚೆಯಾಗಿರುತ್ತದೆ. ಮೊತ್ತ ಎಷ್ಟು ಬೇಕು, ವರ್ಷಾವಾರು ಎಷ್ಟು ಬೇಕು ಈ ಕಾರ್ಯವನ್ನು ಕೇಂದ್ರ/ರಾಜ್ಯಸರ್ಕಾರದ ಸಂಸ್ಥೆಗೆ ವಹಿಸಬೇಕು ಎಂಬುದು ನಿರ್ಣಯ ಆಗಿದೆ.  ಈ ಕಾರ್ಯವನ್ನು ಮುಂದುವರೆಸುವ

ಮತ್ತು ಹಣಕಾಸಿನ ಸಂಪನ್ಮೂಲದ ಬಗ್ಗೆಕೂಡ ಚರ್ಚೆ ನಡೆಸಲಾಗಿದೆ ಮತ್ತು ಈ ಯೋಜನೆಗೆ ಎಷ್ಟು ಹಣ ಬೇಕು ಮತ್ತು ಈ ಹಣವನ್ನು ಠೇವಣಿ ಮಾಡಿ ಬಳಸಿಕೊಳ್ಳಲು ನಿರ್ಣಯಿಸಲಾಗಿದೆ 5 ರಿಂದ 10 ವರ್ಷಗಳ ಅಭಿವೃದ್ಧಿಗೆ ಗಮನದಲ್ಲಿಟ್ಟುಕೊಂಡು ಮಾಡಲಾಗಿದೆ. ಎರಡನೆಯದಾಗಿ ನೀಲಿ ನಕ್ಷೆ ಸಿದ್ದಪಡಿಸುವ ಬಗ್ಗೆ ಸರ್ಕಾರವನ್ನು ಸಂಪರ್ಕಿಸಲಾಗಿತ್ತು. ವಿಶ್ವವಿದ್ಯಾನಿಲಯವು ಸರ್ಕಾರಕ್ಕೆ ಪತ್ರ ಬರೆದು ಈ ಕಾರ್ಯ ಕೈಗೊಳ್ಳಲು 90 ಕೋಟಿ ವಿಶ್ವವಿದ್ಯಾನಿಲಯದಲ್ಲಿ ಇದೆ ಎಂದು ತಿಳಿಸಿರುತ್ತದೆ. ಅಭಿಯಂತರರ ವಿಭಾಗ ಇಲ್ಲದ ಕಾರಣ ಕಟ್ಟಡ ದುರಸ್ತಿ ಮತ್ತು ಮಹಾ ಯೋಜನೆ ಕೈಗೊಳ್ಳಲು ಅಕ್ಟೋಬರ್‌ನಲ್ಲಿ ಸರ್ಕಾರಕ್ಕೆ ಪತ್ರ ಬರೆಯಲಾಗಿರುತ್ತದೆ. ಈ ಕಾರ್ಯವನ್ನು ಸರ್ಕಾರಿ ಸಾಮ್ಯದ ಸಂಸ್ಥೆಗೆ ಕೊಟ್ಟಾಗ ನೀಲಿ ನಕ್ಷೆ ಸಿಂಡಿಕೇಟ್ ಸಭೆಯಲ್ಲಿ ಚರ್ಚೆಯಾಗಿಲ್ಲ ಮತ್ತು ಅನುಮೋದನೆಯಾಗಿಲ್ಲವೆಂದು ನಾವೇ ವಿರೋಧ ಮಾಡಿರುತ್ತೇವೆ. ತದನಂತರ ಸದರೀ ಸಂಸ್ಥೆಯವರು ಸಿಂಡಿಕೇಟ್ ಸದಸ್ಯರು, ವಿಶ್ವವಿದ್ಯಾನಿಲಯದ ಪ್ರಾಧ್ಯಾಪಕರು ಮತ್ತು ವಿಭಾಗದ ಮುಖ್ಯಸ್ಥರುಗಳ ಸಭೆಗೆ ವಿಶ್ವವಿದ್ಯಾನಿಲಯದ ಅಭಿವೃದ್ಧಿಯ ನೀಲಿ ನಕ್ಷೆಯನ್ನು ಪ್ರಸ್ತುತ ಪಡಿಸಿರುತ್ತಾರೆ ಈ ನೀಲಿ ನಕ್ಷೆ ಬಗ್ಗೆ ಮತ್ತು ಏನಾದರೂ ಬದಲಾವಣೆಗಳಿದ್ದರೆ ಸೂಚಿಸಲು ವಿಶ್ವವಿದ್ಯಾನಿಲಯವು ಒಂದು ಸುತ್ತೋಲೆಯನ್ನು ನೀಡಿ ಮಾಹಿತಿ ಕೋರಿರುತ್ತದೆ ಅದರಂತೆ ವಿಶ್ವವಿದ್ಯಾನಿಲಯದ ಪ್ರದ್ಯಾಪಕರು ಮತ್ತು ವಿಭಾಗದ ಮುಖ್ಯಸ್ಥರುಗಳಿಂದ ಯಾವುದೇ ಸಲಹೆಗಳು ಬಂದಿರುವುದಿಲ್ಲವಾದುದರಿಂದ ಸರ್ಕಾರಿ ಸಂಸ್ಥೆಯವರು ಸಿದ್ದಪಡಿಸಿರುವ ನೀಲಿ ನಕ್ಷೆಯನ್ನು ಒಪ್ಪಿಕೊಂಡಂತೆ ಆಗಿರುತ್ತದೆ. ಅದರಂತೆ ಈ ನೀಲಿ ನಕ್ಷೆ ಮತ್ತು ಮಹಾಯೋಜನೆಯನ್ನು ಕಾಮಗಾರಿ ಸಮಿತಿ ಮುಂದೆ ಮಂಡಿಸಿ ಅನುಮೋದನೆ ಮಾಡಿ ಇಂದು ಸಿಂಡಿಕೇಟ್ ಸಭೆಯ ಮುಂದೆ ಅನುಮೋದನೆಗೆ ಮಂಡಿಸಲಾಗಿದೆ ಮತ್ತು ಈ ನೀಲಿ ನಕ್ಷೆಯಲ್ಲಿ ಇನ್ನೂ ಬದಲಾವಣೆಗೆ ಅವಕಾಶ ಇದೆ ನಾವೇ ಬದಲಾವಣೆ ಮಾಡಿ ಕಳುಹಿಸೋಣ, ಎಲ್ಲವನ್ನೂ ಪರಿಶೀಲಿಸೋಣ. ಈ ಯೋಜನೆ ಕೈಗೊಳ್ಳಲು ಅಂತಿಮ ನಿರ್ಣಯ ಮಾಡಿ ಸರ್ಕಾರ ಸೂಚಿಸಿದ ಸಂಸ್ಥೆಗೆ ವಹಿಸೋಣ. ಬೇರೆ ನೀಲಿ ನಕ್ಷೆ ಮಾಡಿಸೋಣ ಎಂಬುದರ ಬಗ್ಗೆ ನನ್ನ ಆಕ್ಷೇಪಣೆ ಇದೆ. ನಮ್ಮ ನಮ್ಮ ವೈಯುಕ್ತಿಕ ಅಭಿಪ್ರಾಯದ ಅಡಿಯಲ್ಲಿ ಬದಲಾವಣೆ ಸರಿಯಲ್ಲ ಮತ್ತು 6ನೇ ಕಾಮಗಾರಿ ಸಮಿತಿಯ ನಿರ್ಣಯದಂತೆ ಮುಂದುವರೆಯಲು ಸಹಮತಿ ವ್ಯಕ್ತಪಡಿಸಿದರು.

ಮಾನ್ಯ ಸದಸ್ಯರಾದ ಡಾ. ಆರ್. ಕೆ. ಚಂದ್ರನಾಥ್ ಅವರು ಮಾತನಾಡಿ ಈ ನಿರ್ಣಯ 2020 ರಲ್ಲಿ ಆಗಿದ್ದು, ಈಗ ತಲೆತಗ್ಗಿಸುವಂತಾಗಿದೆ. ಡಾ. ಹೆಚ್. ಟಿ. ಅರವಿಂದ ಅವರು ಹೇಳಿದ ಮಾತುಗಳನ್ನು ನಾನು ಒಪ್ಪುತ್ತೇನೆ. ಧೃಡ ನಿರ್ಧಾರ ತೆಗೆದುಕೊಳ್ಳಬೇಕು. ಹಿಂದೆ ತೆಗೆದುಕೊಂಡ ನಿರ್ಣಯಕ್ಕೆ ಬದ್ದರಾಗಿರೋಣ ಎಂದರು.

ಮಾನ್ಯ ಕುಲಪತಿಗಳು ಮಾತನಾಡಿ ಹಿಂದಿನ ಕುಲಪತಿಗಳು ಸರ್ಕಾರಕ್ಕೆ ಪತ್ರ ಬರೆದು ವಿಶ್ವವಿದ್ಯಾನಿಲಯದಲ್ಲಿ 90 ಕೋಟಿ ಹಣ ಲಭ್ಯವಿದ್ದು ಸರ್ಕಾರವು ಈ ಮಹಾಯೋಜನೆಯನ್ನು ತನ್ನ ಅಧೀನದಲ್ಲಿ ಬರುವ ಯಾವುದೇ ಸಂಸ್ಥೆಗೆ ವಹಿಸಿ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳುವಂತೆ ಕೋರಿರುತ್ತಾರೆ, ಈ ರೀತಿ ಪತ್ರ ವ್ಯವಹಾರ ನಡೆಸುವಾಗ ಅಂದಿನ ಕುಲಪತಿಗಳು ವಿಶ್ವವಿದ್ಯಾನಿಲಯದ ನಿಯಮಾವಳಿಗಳನ್ನು ಪಾಲನೇ ಮಾಡದೇ, ಕಾಮಗಾರಿ ಸಮಿತಿಯಲ್ಲಾಗಲೀ ಅಥವಾ ಸಿಂಡಿಕೇಟ್ ಸಭೆಯಲ್ಲಿ ಚರ್ಚೆ ಮಾಡದೇ ಏಕಪಕ್ಷೀಯವಾದ ತೀರ್ಮಾನವನ್ನು ತೆಗೆದುಕೊಂಡಿದ್ದರಿಂದ ಈ ಕಾಮಗಾರಿಯ ಅನುಷ್ಠಾನವು ವಿಳಂಬವಾಗಿರುತ್ತದೆ. ಆದ್ದರಿಂದ ಈ ವಿಷಯನ್ನು ತಾಂತ್ರಿಕ ಸಮಿತಿ, ಕಾಮಗಾರಿ ಸಮಿತಿಯ ಮುಂದೆ ಮಂಡಿಸಿ ಇಂದು ಸಿಂಡಿಕೇಟ್ ಸಭೆಯ ಮುಂದೆ ಮಂಡಿಸಿ ಅನುಮೋದನೆ ಕೋರುತ್ತಿದ್ದೇನೆ ಎಂದು ಸಭೆಗೆ ತಿಳಿಸಿದರು.

ಮಾನ್ಯ ಸದಸ್ಯರಾದ ಶ್ರೀ ಕರಣ್ ಕುಮಾರ್ ಅವರು ಆ ಪತ್ರದ ಉಲ್ಲೇಖ ಮಾಡಿ ನಾನು ಮಾಹಿತಿ ಕೋರಿದೆ. ಸಿಂಡಿಕೇಟ್ ಸಭೆಯಲ್ಲಿ ಚರ್ಚಿಸದೆ ಇರುವ ಬಗೆಗೆ ಸರ್ಕಾರ ಹಿಂದಕ್ಕೆ ಕಳಿಸಿತ್ತು. ಆದ್ದರಿಂದ ದಿನಾಂಕ: 18.11.2020 ರಂದು ನಡೆಯಬೇಕ್ಕಿದ್ದ ಶಿಲಾನ್ಯಾಸ ಮುಂದೂಡಬೇಕೆಂದು ಸಭೆ ನಿರ್ಣಯಿಸಿತು.

ಮಾನ್ಯ ಕುಲಪತಿಗಳು ಮಾತನಾಡುತ್ತಾ ಈ ಮಹಾಯೋಜನೆಯ ಕರಡು ನೀಲಿ ನಕ್ಷೆಯನ್ನು ಸಿಂಡಿಕೇಟ್ ಸದಸ್ಯರು, ವಿದ್ಯಾವಿಷಯಕ ಪರಿಷತ್ತಿನ ಸದಸ್ಯರು, ನಿಕಾಯದ ಮುಖ್ಯಸ್ಥರು, ವಿಭಾಗಗಳ ಮುಖ್ಯಸ್ಥರು ಮತ್ತು ಪ್ರಾಧ್ಯಾಪಕರ ಅನೌಪಚಾರಿಕ ಸಭೆಯನ್ನು ಕರೆದು ಕರ್ನಾಟಕ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯು ಸಿದ್ಧಪಡಿಸಿರುವ ಕರಡು ನೀಲಿ ನಕ್ಷೆಯನ್ನು ಪ್ರಸ್ತುತಪಡಿಸಲಾಗಿದ್ದು ಈ ಕರಡು ನೀಲಿ ನಕ್ಷೆಯಲ್ಲಿ ಏನಾದರೂ ಬದಲಾವಣೆಗಳಿದ್ದರೆ ಲಿಖಿತವಾಗಿ ತಿಳಿಸಲು ವಿಶ್ವವಿದ್ಯಾನಿಲಯದ ಸಂಬಂಧಪಟ್ಟ ವಿಭಾಗಗಳಿಗೆ ಸೂಚಿಸಲಾಗಿತ್ತು. ಈ ಬಗ್ಗೆ ವಿಶ್ವವಿದ್ಯಾಲಯಕ್ಕೆ ವಿಭಾಗಗಳ ಮುಖ್ಯಸ್ಥರಿಂದಾಗಲೀ, ಪ್ರಾಧ್ಯಾಪಕರಿಂದಾಗಲೀ ಆಕ್ಷೇಪಣೆಗಳು ಮತ್ತು ಬದಲಾವಣೆಗಳು ಬಂದಿರುವುದಿಲ್ಲ ಆದ್ದರಿಂದ 6ನೇ ಕಾಮಗಾರಿ ಸಮಿತಿಯು ಅನುಮೋದಿಸಿರುವ ಮಹಾಯೋಜನೆಯ ನೀಲಿ ನಕ್ಷೆಯಂತೆ ಕ್ರಮ ವಹಿಸಲು ಸರ್ಕಾರಕ್ಕೆ ಕೋರಿಕೆಯನ್ನು ಸಲ್ಲಿಸಲು ಸಭೆಯ ಅನುಮೋದನೆಯನ್ನು ಕೇಳಲಾಯಿತು.

ಚರ್ಚೆಯಲ್ಲಿ ಭಾಗವಹಿಸಿದ ಸದಸ್ಯರಾದ ಶ್ರೀ ಹೆಚ್. ಎನ್. ಹರಿಪ್ರಸಾದ ರವರು ಕಾಮಗಾರಿ ಸಮಿತಿಯು ಅನುಮೋದಿಸಿರುವ ಪ್ರಕಾರ ಕ್ರಮ ವಹಿಸಲು ತಮ್ಮ ಸಹಮತವನ್ನು ವ್ಯಕ್ತಪಡಿಸಿದರು. ಈ ವಿಷಯಕ್ಕೆ ಶ್ರೀ ಆರ್. ಕೆ ಚಂದ್ರನಾಥ್, ಶ್ರೀ ಹೆಚ್. ಟಿ. ಶ್ರೀನಿವಾಸಯ್ಯ, ಡಾ. ಹೆಚ್. ಟಿ. ಅರವಿಂದ್, ಶ್ರೀ. ಎಂ. ಚಿಕ್ಕಮುನಿಯಪ್ಪ, ಪ್ರೊ. ಕೆ. ರಮೇಶ್, ಶ್ರೀ. ಹೆಚ್. ಆರ್. ಸತೀಶ್, ಡಾ. ಲಿಡಿಯಾ ಪಿ ಸ್ಯಾಮುಯೆಲ್ ಮತ್ತು ಡಾ. ಪಿ. ವಿ. ಪದ್ಮಜಾ ರವರು ಸಹಮತ ವ್ಯಕ್ತಪಡಿಸಿದರು.

ಸಭಾಧ್ಯಕ್ಷರಾದ ಕುಲಪತಿಗಳು ಮಾತನಾಡುತ್ತಾ ಮೊದಲನೆಯ ಹಂತದಲ್ಲಿ ಕಟ್ಟಡಗಳ ದುರಸ್ತಿ ಮತ್ತು ನವೀಕರಣ ಕಾರ್ಯವು ಬಹು ಮುಖ್ಯವಾಗಿರುವುದರಿಂದ ಕರ್ನಾಟಕ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯು ಸಿದ್ದಪಡಿಸಿರುವ ನೀಲಿ ನಕ್ಷೆಯಲ್ಲಿ ನಮೂದಿಸಿರುವಂತೆ ರೂ. 25,14,96,311/-ಗಳ ಹಳೆಯ ಕಟ್ಟಡಗಳ ದುರಸ್ತಿ ಮತ್ತು ನವೀಕರಣ ಕಾಮಗಾರಿಯನ್ನು ಜರೂರಾಗಿ ಕೈಗೆತ್ತಿಕೊಳ್ಳಲು ಸರ್ಕಾರವನ್ನು ಕೋರುವುದಕ್ಕೆ ಸಭೆಯ ಅನುಮೋದನೆಯನ್ನು ಕೋರಿದರು.

ಶ್ರೀಮತಿ ಜ್ಯೋತಿ ವಿಜಯ್ ರವರು ಚರ್ಚೆಯಲ್ಲಿ ಮಾತನಾಡುತ್ತಾ ವಿದ್ಯಾರ್ಥಿನಿಲಯ ನಿರ್ಮಾಣದ ವಿಯಷವನ್ನು ಯೋಜನೆಯಲ್ಲಿ ಸೇರಿಸಬೇಕಗಿರುವುದರಿಂದ ಕಟ್ಟಡಗಳ ದುರಸ್ತಿಯನ್ನು ಹೊರತುಪಡಿಸಿ, ಕ್ರೀಡಾ ಸಮುಚ್ಚಯ, ಶೈಕ್ಷಣಿಕ ಕಟ್ಟಡದ ಮಹಾಯೋಜನೆಯಲ್ಲಿ ಮಾರ್ಪಾಡುಗಳನ್ನು ಸೂಚಿಸಬೇಕಾಗಿರುವುದರಿಂದ ಮತ್ತೊಮ್ಮೆ 10 ದಿನದೊಳಗೆ ಸಭೆಯನ್ನು ಕರೆದು ಚರ್ಚಿಸಿ ಈ ಮಹಾಯೋಜನೆಗೆ ಅನುಮೋದನೆ ನೀಡಬೇಕೆಂದು ಅಭಿಪ್ರಾಯ ಪಟ್ಟರು. ಶ್ರೀ ಕರಣ್ ಕುಮಾರ್ ಮತ್ತು ಇತರೆ ಸದಸ್ಯರು ಈ ಅಭಿಪ್ರಾಯಕ್ಕೆ ಸಹಮತ ಸೂಚಿಸಿದರು.

ಸಿಂಡಿಕೇಟ್ ಸಭೆಯ ನಿರ್ಣಯ:

1. **ಬೆಂಗಳೂರು ನಗರ ವಿಶ್ವವಿದ್ಯಾನಿಲಯವು ಹಮ್ಮಿಕೊಂಡಿರುವ 155 ಕೋಟಿ ರೂಪಾಯಿಗಳ ಅಭಿವೃದ್ಧಿ ಯೋಜನೆಗೆ ಸಿಂಡಿಕೇಟ್ ಸಭೆಯು ತಾತ್ವಿಕವಾಗಿ ಸರ್ವಾನುಮತದಿಂದ ಅನುಮೋದನೆಯನ್ನು ನೀಡಿತ್ತಾ ಯೋಜನೆಯಲ್ಲಿ ಕೆಲವು ಮಾರ್ಪಾಡುಗಳನ್ನು ಸೂಚಿಸಲು ಇನ್ನು 10 ದಿನದೊಳಗೆ ಸಭೆಯನ್ನು ಕರೆದು ಸಭೆಯ ನಿರ್ಧಾರವನ್ನು ಸರ್ಕಾರಕ್ಕೆ ತಿಳಿಸಲು ತೀರ್ಮಾನಿಸಲಾಯಿತು.**

2. ವಿಶ್ವವಿದ್ಯಾನಿಲಯದ ಹಳೆಯ ಕಟ್ಟಡಗಳ ದುರಸ್ತಿ ಮತ್ತು ನವೀಕರಣ ಕಾಮಗಾರಿಯನ್ನು ಜರೂರಾಗಿ ಕೈಗೆತ್ತಿಕೊಳ್ಳಲು ಸರ್ಕಾರವು ವಹಿಸಿರುವ ಸಂಸ್ಥೆಗೆ ಕೂಡಲೇ ಕಾರ್ಯಗತಗೊಳಿಸುವಂತೆ ಸೂಚಿಸುವುದು ಮತ್ತು ಈ ಕಾಮಗಾರಿಗೆ ಮೀಸಲಿಟ್ಟಿರುವ ರೂ. 25,14,96,311/-ಗಳನ್ನು ಸರ್ಕಾರ ಸೂಚಿಸಿರುವ ಸಂಸ್ಥೆಗೆ ಬಿಡುಗಡೆ ಮಾಡಲು ಸಭೆಯು ಸರ್ವಾನುಮತದಿಂದ ಅನುಮೋದಿಸಿತು.

ಕುಲಸಚಿವರಿಂದ ವಂದನಾರ್ಪಣೆ ಹಾಗೂ ರಾಷ್ಟ್ರಗೀತೆಯೊಂದಿಗೆ ಸಭೆ ಮುಕ್ತಾಯವಾಯಿತು.

ಸಹಿ/-
ಕುಲಸಚಿವರು ಮತ್ತು
ಸದಸ್ಯ ಕಾರ್ಯದರ್ಶಿಗಳು

ಸಹಿ/-
ಕುಲಪತಿಗಳು

ಕುಲಸಚಿವರು
ಬೆಂಗಳೂರು ನಗರ ವಿಶ್ವವಿದ್ಯಾನಿಲಯ